ಮೂಟೆಯನ್ನು ತೆಗೆದುಕೊಂಡರು. "ಈ ಕಡೆ ನೋಡ್ಕೊಂಡು ಮೆಲ್ಲಗೆ ಬನ್ನಿ. ಪೊದರು, ಮುಳ್ಳು ಇವೆ" ಎನ್ನುತ್ತಾ ನಾನು ಅವರನ್ನು ಬೇಲಿಯ ಕಡೆಗೆ ಕರೆದುಕೊಂಡುಹೋದೆ. ಬೇಲಿಯಲ್ಲಿ ಹರಡಿದ್ದ ಒಂದು ಬಳ್ಳಿಯನ್ನು ನೋಡಿ ಮುಖ ಅರಳಿಸುತ್ತ "ಆಹಾ, ಇಲ್ಲಿದೆ" ಎನ್ನುತ್ತ ಒಂದು ಕ್ಷಣ ನಿಂತರು. ಒಂದು ಎಲೆಯನ್ನು ಚಿವುಟಿದ ಕೂಡಲೇ ಹನಿಹನಿಯಾಗಿ ಹಾಲು ಬಂದಿತು. ಇದರಲ್ಲಿ ಏನು ಆಶ್ಚರ್ಯ ಎಂಬಂತೆ ನಾನು ಅವರನ್ನು ನೋಡಿದೆ. "ಚಿಕ್ಕ ಬುದ್ಧಿ, ಇದರ ಹೆಸರು ಹಾಲುಕೊರಟಿಗೆ. ಇದರ ಹಾಲನ್ನು ಬಲಿಯದ ಗುಳ್ಳೆ ಮೇಲೆ ಇಟ್ಟರೆ ಗುಳ್ಳೆ ಬಲಿತುಹೋಗಿ ಒಡೆಯುತ್ತೆ" ಎಂದು ಹೇಳುತ್ತಲೇ ಆ ಎಲೆಯನ್ನು ಕೆಳಗೆ ಬಿಸಾಕಿದರು.

"ಹಾಲಿನ ಲೆಕ್ಕವೆಲ್ಲ ಚಿಕ್ಕ ಬುದ್ಧಿಯವರೇ ಬರೆಯೋದೋ?" ಎಂದು ಅವರು ದಿಢೀರೆಂದು ಕೇಳಿದಾಗ ಆಶ್ಚರ್ಯದಿಂದ ತಿರುಗಿ ನೋಡಿ, "ನಿಮಗೆ ಹೇಗೆ ಗೊತ್ತು?" ಎಂದು ನಂಬಲಾಗದೆ ಅವರನ್ನು ಕೇಳಿದೆ. "ನೋಟ್ಬುಕ್ ಸಮೇತ ಚಿಕ್ಕ ಬುದ್ಧಿ ಕೂತಿದ್ದನ್ನ ನಾನ್ ನೋಡ್ದೆ" ಎಂದರು.

"ಓ..." ಹೆಮ್ಮೆಯಿಂದ ಒಂದು ಕ್ಷಣ ಅವರನ್ನು ನೋಡಿ ಮುಂದೆ ನಡೆದೆ.

"ಒಂದು ಹೊತ್ತಿಗೆ ಐವತ್ತು ಅರವತ್ತು ಸೇರು ಸಿಗುತ್ತಾ ಚಿಕ್ಕ ಬುದ್ಧಿ" ಅವರು ಮತ್ತೆ ಮಾತನ್ನು ಮುಂದುವರೆಸಿದರು.

"ಮ್ ಹೂ, ನಲವತ್ತು ಐವತ್ತು ಸಿಗುತ್ತೆ."

''ಸಾಯಂಕಾಲಕ್ಕೆ?"

"ಇಲ್ಲ, ಸಾಯಾಂಕಾಲದ ಸಮಯ ನಾವು ಕರೆಯೋದಿಲ್ಲ..."

ಕತ್ತಾಳೆ ಪೊದರುಗಳನ್ನು ಚಿಕ್ಕಕಾಡಹರಳು ಗಿಡಗಳನ್ನು ಹಾದು ಬಿದಿರಿನ ತಟ್ಟಿಗೆಯನ್ನು ತಳ್ಳಿ ತೋಟದೊಳಗೆ ಹೋದೆವು.

"ಬರ್ತಿದ್ದಾನೆ ನೋಡು ಇವನೇ" ಎಂದು ಅಮ್ಮನ ಬಳಿ ಅಪ್ಪ ಹೇಳುವುದು ನನ್ನ ಕಿವಿಗೆ ಬಿತ್ತು. ಅಮ್ಮ ಅವರನ್ನು ಒಂದು ಕ್ಷಣ ತಿರುಗಿ ನೋಡಿದರು. ಒದ್ದೆ ತಲೆಗೆ ಟವಲನ್ನು ಸುತ್ತಿಕೊಂಡಿದ್ದ ಅಮ್ಮನ ಬಳಿಯಿಂದ ಚಂದ್ರಿಕ ಸೋಪಿನ ವಾಸನೆ ಹೊಮ್ಮುತ್ತಿತ್ತು. ಹಣೆಗೆ ಕುಂಕುಮ, ವಿಭೂತಿ ಇಟ್ಟಿದ್ದರು.

ಅಮ್ಮನ ಬಳಿ, "ಎಷ್ಟೊಂದು ತೊಟ್ಟಿ ತೆಗೆದು ಇಟ್ರು ಒಂದೂ ಉಳಿಯಲ್ಲ. ಹಸ ತಿವೀತು, ಕರ ತಿವೀತು ಅಂಥ ತಿಂಗಳಿಗೆರೆಡು ತೊಟ್ಟಿ ಒಡೆದುಹೋಗುತ್ತೆ. ಕಲ್ಲಿನ ತೊಟ್ಟಿ ಆದ್ರೆ ಚಿಂತೆ ಇರಲ್ಲ. ಒಳ್ಳೆ ಸಮಯ ನೋಡೇ ಇವನು ಬಂದಿದ್ದಾನೆ. ಏನು ಹೇಳ್ತೀಯಾ?'' ಎಂದು ಕೇಳಿದರು. ಅವರಿಗೆ ಉತ್ತರ ಹೇಳದೇ, ತೊಟ್ಟಿ ಮಾಡುವವವರನ್ನು ನೋಡಿ, "ಕಲ್ಲು ತೊಟ್ಟಿ ಅಂದ್ರೆ ಒಳಭಾಗ ಎಲ್ಲಾ ಒರಟೊರಟಾಗಿ ಇರುತ್ತೆ. ಹಿಂಡಿ ಹಾಕಿ ಕರಗಿಸುವಾಗ, ತೊಳಿಯುವಾಗ ತೊಂದ್ರೆ ಆಗುತ್ತಲ್ವಾ?" ಎಂದು ಸಂಶಯದಿಂದ ಕೇಳಿದರು.

"ನುಣ್ಣಗೆ ಅಮೃತಶಿಲೆ ಹಂಗೆ ನಾನು ಮಾಡಿಕೊಡ್ತೀನಮ್ಮಾ. ಒಂದು ಚಿಕ್ಕ ತರಚಲು ಕೂಡ ಇರಲ್ಲ. ಅಷ್ಟುಮಟ್ಟಿಗೆ ಕೆಲಸ ಅಚ್ಚುಕಟ್ಟಾಗಿರುತ್ತಮ್ಮ" ಎಂದು ಅವರು ವಿನಯದಿಂದ ಅಮ್ಮನಿಗೆ ಹೇಳಿದರು.

"ನಮ್ಮ ಕೈಗೆ ಚುಚ್ಚಿದ್ರೆ ಪರವಾಗಿಲ್ಲ. ಬಾಯಿಲ್ಲದೆ ಇರೋ ಜೀವಗಳು, ತೊಟ್ಟಿ ಒಳಗೆ ಬಾಯಿಡೋವಾಗ ಮೂಗಿಗೆ ಚುಚ್ಚಿ, ನಾಲಿಗೆ ಸೀಳಿ ರಣವಾಗಬಾರದಲ್ವಾ, ಅದಕ್ಕೆ ಹೇಳಿದ್ದು..."

"ಹಾಗಲ್ಲಾ ಆಗದಹಾಗೆ ಮಾಡಿಕೊಡೋದು ನನ್ನ ಜವಾಬ್ದಾರಿ ಅಮ್ಮ..."

ಅಮ್ಮ ಮತ್ತೆ ಅಪ್ಪನ ನೋಡಿ, "ಸರಿ, ಮಾಡೋದಿಕ್ಕೆ ಹೇಳಿ" ಎಂದರು. "ಕೂಲಿ ಮಾತಾಡಿದ್ರಾ?" ಎಂದು ಕೇಳಿದರು. "ಮಾಡಿ ಮುಗಿಸೋವರೆಗೂ ಹೊತ್ತೊತ್ತಿಗೆ ಗಂಜಿ ಹುಯ್ರಿ. ಹೊರಡೋವಾಗ